ಇಟ್ಟುಕೊಂಡಿದ್ದ ಎಂದರೆ ನಂಬುವುದಕ್ಕೆ ಕಷ್ಟ. ನಂತರದಲ್ಲಿ ಯಾರೊ ಅದನ್ನು ಅಲ್ಲಿ ತಂದಿರಿಸಿದಂತೆ ಕಾಣುತ್ತದೆ. ಅಷ್ಟೇ ಅಲ್ಲ ಸರ್... ಅಮ್ಮುವಿನ ಮರಣೋತ್ತರ ವರದಿಯ ಪ್ರಕಾರ ಕೊಲೆಗೆ ಬಳಸಿದ ಆ ಸರಳಿನ, ಸುರುಳಿ ಸುತ್ತುಗಳಿರುವ ತುದಿಯ ಮೇಲೆ ಅಮ್ಮುವಿನ ರಕ್ತ, ಕೂದಲು, ಚರ್ಮ ಮತ್ತು ಮಾಂಸದ ಸಣ್ಣ ತುಣುಕುಗಳಷ್ಟೇ ಅಲ್ಲದೆ ಕಂಬಳಿ ಬಟ್ಟೆಯಲ್ಲಿರುವಂತಹ ಸಾಕಷ್ಟು ಸೂಕ್ಷ್ಮ ಎಳೆಗಳು ದೊರೆತಿವೆ. ಆದರೆ ಆ ಎಳೆಗಳ್ಯಾವುವೂ ಜಯಂತನು ಅಂದು ತೊಟ್ಟಿದ್ದ ಬಟ್ಟೆಗಾಗಲಿ ಅಥವಾ ಅವನ ಕಾರಿನ ಕಾರ್ಪೆಟ್ ಎಳೆಗಳಿಗಾಗಲಿ ತಾಳೆಯಾಗುವುದಿಲ್ಲ. ಅಲ್ಲದೆ ಆ ಸರಳಿನ ಹಿಡಿಯನ್ನು ರಬ್ಬರ್ ಗ್ಲೌಸ್ ತೊಟ್ಟ ಹಸ್ತವೊಂದು ಹಿಡಿದು ಎಲ್ಲಾ ಕಲಸಿ ಬೆರೆತಂತಹ ಕುರುಹುಗಳಿವೆ. ಇದೆಲ್ಲಾ ಮರಣೋತ್ತರದ ವಿವಿಧ ಪರೀಕ್ಷಾ ವರದಿಗಳಲ್ಲಿವೆ. ಇದು ಸ್ಪಷ್ಟವಾಗಿ ಜಯಂತನನ್ನು ಈ ಕೊಲೆಯಲ್ಲಿ ಸಿಲುಕಿಸುವ ಪ್ರಯತ್ನಗಳಂತೆ ಕಾಣುತ್ತವೆ.

'ಸರ್, ಬೇರೆ ಶಂಕಿತ ಆರೋಪಿಗಳ ಪರಿಶೀಲನೆಗೆ ಮುಂಚೆ ಒಂದು ಕಪ್ ಕಾಫಿ...'

'ಓಕೆ... ವೈ ನಾಟ್'.

16

ಅಮ್ಮುವಿನ ಕೊಲೆ ಪ್ರಕರಣದ ಶಂಕಿತರ ಪಟ್ಟಿಯಲ್ಲಿ, ಸಾಕ್ಷಿ ಪುರಾವೆಗಳ ಆಧಾರದ ಮೇಲೆ ನಿರಪರಾಧಿಗಳನ್ನು ಮತ್ತು ಅಪರಾಧಿಯನ್ನು ವಿಂಗಡಿಸಿ, ಗುರುತಿಸುವ ಪ್ರಕ್ರಿಯೆ ಬೆಳಿಗ್ಗೆ ಆರಂಭವಾಗಿ ಹಾಗೆ ಮುಂದುವರಿದಿತ್ತು. ಮಾಯಣ್ಣ ಎಸ್‌ಪಿ ಸಾಹೇಬರನ್ನ ಕುರಿತಂತೆ,

'ಸರ್ ಅಮ್ಮುವಿನ ಕೊಲೆ ಪ್ರಕರಣದ ತನಿಖೆಯಿಂದ ರವಿಯ ಹೆಸರನ್ನೂ ಕೈಬಿಟ್ಟಿದ್ದೇನೆ ಸರ್'.

'ಅದಕ್ಕೆ ಆಧಾರಗಳೇನು ಮಾಯಣ್ಣ?'

'ಇದೆ ಸರ್... ಅಮ್ಮು ಅವರ ಆಪ್ತ ಸ್ನೇಹಿತೆ ಸಿತಾರ, ಅಮ್ಮು ಕೊಲೆಯಾದ ದಿನದ ಬೆಳಿಗ್ಗೆ, ಒಂದು ವಿಶೇಷವಾದ ಖಾದ್ಯ ತಾವೇ ಮಾಡಿ, ಆ್ಯಪ್ ಮೂಲಕ ಫುಡ್ ಡೆಲಿವರಿ ಮಾಡಲು ಅಮ್ಮು ಅವರ ಮನೆಗೆ ಕಳಿಸಿದ್ದರು. ಅದನ್ನ ಅಮ್ಮು ಮನೆಗೆ ಡೆಲಿವರಿ ಕೊಟ್ಟ ಹುಡುಗ ರಾಜಣ್ಣನನ್ನ ಕರೆಸಿದ್ದೀನಿ. ವಿನಯ್, ಆ ಹುಡುಗ ಹೊರಗಿರಬೇಕು, ಒಳಗೆ ಕರೀರಿ ಅವನನ್ನ'.

'ಯೆಸ್ ಸಾರ್'.

ಒಳಬಂದ ರಾಜಣ್ಣನನ್ನು ಕುರಿತು,

'ರಾಜಣ್ಣ, ಮೊನ್ನೆ ನಾನು ನಿನಗೆ ಫೋನ್ ಮಾಡಿದಾಗ ನೀನು ಹೇಳಿದ ವಿಷಯ ಇಲ್ಲಿ ಮತ್ತೊಮ್ಮೆ ಹೇಳು...'

'ಸಾರ್, ಅವತ್ತು ನಾನು ಆ ಅಡ್ರೆಸ್ ಮುಂದೆ ಕರೆಕ್ಟಾಗಿ ಬಂದು, ನನ್ನ ಬ್ಯಾಕ್ ಪ್ಯಾಕಲ್ಲಿ ಪಾರ್ಸಲ್ ಪಿಕ್ ಮಾಡ್ತಿದ್ದಂಗೆ ಇನ್ಸ್‌ಪೆಕ್ಟರ್ ಫೋಟೊನಲ್ಲಿ ತೋರ್ಸಿದವ್ರು ಅದ್ಯಾರೊ ಜಯಂತ್ ಅಂತ ಹೇಳುದ್ರು ಅವರೆಸ್ರು... ಮೇಲಿಂದ ಮೆಟ್ಲು ಇಳಕೊಂಡು ಬಂದು ಕಾರಲ್ಲಿ ಹೊರಟೋದ್ರು... ನಾನು ಸೆಂಡರ್ ನಂಬರಿಗೆ ಫೋನ್ ಮಾಡ್ದೆ. ಆ ನಂಬರ್ ಎಂಗೇಜ್ ಆಗಿತ್ತು. ಅಷ್ಟೊತ್ತಿಗೆ ಸರಿಯಾಗಿ...'

ಮಾಯಣ್ಣನ ಕಡೆ ತಿರುಗಿ–

'ನೀವು ಇನ್ನೊಬ್ಬರ ಫೋಟೊ ತೋರ್ಸುದ್ರಲ್ಲ ಸಾರ್, ಆ ಇನ್ನೊಂದು ಪಾರ್ಟಿ ಅದೆಲ್ಲಿಂದನೊ ಗೇಟ್ ಹತ್ರ ಬಂದು, ಪಾರ್ಸಲ್ ಯಾರಿಗೆ ಅಂತ ಕೇಳಿ, ಸೈನ್ ಹಾಕಿ, ಅವರ ಫೋನ್ ನಂಬರ್ ಹಾಕಿ, ಪಾರ್ಸಲ್ ಕಲೆಕ್ಟ್ ಮಾಡ್ಕೊಂಡ್ರು ಸಾರ್... ಡ್ರಿಂಕ್ಸ್ ಮಾಡಿದ್ರೋ ಏನೊ ಗೊತ್ತಿಲ್ಲ ಸರ್, ಅಂತು ಅವರು ಸ್ಟೆಡಿಯಾಗಿರಲಿಲ್ಲ. ಆಮೇಲೆ ಅದೇನಾಯ್ತೋ ಏನೋ... ಗೇಟ್ ಒಳಕ್ಕೋಗದೆ ವಾಪಸ್ ಅಂಗೇ ಹೋಗಿ, ಅಲ್ಲಿ ದೂರದಲ್ಲಿ ನಿಲ್ಸಿದ್ದ ಜೀಪಲ್ಲಿ ಕೂತ್ಕೊಂಡ್ರು... ಆಮೇಲೆ ನೋಡುದ್ರೆ ನನ್ ಬೈಕ್ ಪಂಚರಾಗಿತ್ತು. ನಾನು ಇನ್ನೂ ನಾಲ್ಕು ಡೆಲಿವರಿ ಕೊಡಬೇಕಾಗಿತ್ತು. ಸರಿ ನಾನು ನನ್ ತಮ್ಮಂಗೆ ಕಾಲ್ ಮಾಡಿ ಅವನ ಬೈಕ್ ತರೋಕೆ ಹೇಳಿ, ಆ ಜೀಪ್ ಪಕ್ಕದಲ್ಲಿ ಒಂದು ಚಪ್ಪಡಿ ಕಲ್ಲಿಂದು ಬೆಂಚ್ ಕಟ್ಟೆ ಇತ್ತು... ಹೋಗಿ, ಅಲ್ಲಿ ನನ್ ತಮ್ಮಂಗೆ ಕಾಯ್ಕೊಂಡ್ ಕುಂತ್ಕೊಂಡೆ. ಜೀಪಲ್ಲಿ ಆ ಪಾರ್ಟಿ, ಪಾರ್ಸಲ್ ಓಪನ್ ಮಾಡಿ, ಅದರಲ್ಲಿ ಅದೇನೋ ಪಲಾವ್ ಏನೊ ಇತ್ತೇನೊ ತಿನ್ಕೊಂಡಿದ್ರು... ಅಂಗೆ ಒಂದಿಪ್ಪತ್ತು ನಿಮಿಷ ಆದ್ಮೇಲೆ ನನ್ ತಮ್ಮನ ಕಾಲ್ ಬಂತು. ಮಾತಾಡ್ತಿದ್ದಂಗೆ ಇವರು ಜೀಪ್ ಸ್ಟಾರ್ಟ್ ಮಾಡ್ಕೊಂಡು ಹೋಗ್ಬಿಟ್ರು ಸಾರ್... ಇನ್ನೊಂದು ಐದು ನಿಮಿಷಕ್ಕೆ ನಂತಮ್ಮ ಬಂದ. ನಾನು ಅವನ ಬೈಕ್ ತಗೊಂಡೋದೆ ಸಾರ್... ಅಷ್ಟೇ ಸಾರ್ ನಾನು ಅಲ್ಲಿ ನೋಡಿದ್ದು'.

'ಮಾಯಣ್ಣ, ಇವನ ತಮ್ಮ ಏನಾದರೂ ನೋಡುದ್ನ ಅಲ್ಲಿ... ವಿಚಾರುಸುದ್ರಾ..?'

'ವಿಚಾರ್ಸಿದ್ದೀನಿ ಸಾರ್.... ಅವನು ಹಾಗೆ ಪಂಚರ್ ಗಾಡಿನ ತಳ್ಕೊಂಡು ಹಿಂದಕ್ಕೆ ನೋಡದೆ ಹೊರಟೋದೆ ಅಂದ ಸಾರ್...'

'ಓಕೆ'.

'ಸರಿ ರಾಜಣ್ಣ, ನೀನು ಹೊರಡು...' ಎಂದ ಮಾಯಣ್ಣನಿಗೆ ತಲೆ ಆಡಿಸಿ ರಾಜಣ್ಣ ಹೊರಟ.

'ರಾಜಣ್ಣನ ಮೊಬೈಲಲ್ಲಿ ಕಾಲ್ ರೆಕಾರ್ಡ್ಸೆಲ್ಲಾ ಚೆಕ್ ಮಾಡಿದ್ದೀನಿ ಸರ್. ಫೋನ್ ನಂಬರ್, ಟೈಮಿಂಗ್ಸು ಎಲ್ಲಾ ತಾಳೆ ಆಗುತ್ತೆ ಸರ್...'

'ಓಕೆ, ಇವನು ಇದರಲ್ಲಿ ಇನ್ವಾಲ್ವ್ ಆಗಿಲ್ಲ ಅನ್ಸುತ್ತೆ ಮಾಯಣ್ಣ'.

ಎಸ್.ಪಿ. ಸಾಹೇಬರು ಮುಂದಕ್ಕೇನು ಎಂಬಂತೆ ಮಾಯಣ್ಣನ ಕಡೆ ನೋಡಿದರು.

'ಸರ್... ದಿನೇಶ್ ಕೂಡ ಈ ಕೊಲೆ ಮಾಡಿಲ್ಲ ಸಾರ್...'

ಮಾಯಣ್ಣನ ಕೋರ್ಟಲ್ಲಿ ಮುಖ್ಯ ಆರೋಪಿಗಳೆಲ್ಲಾ ಒಬ್ಬೊಬ್ಬರೇ ಖುಲಾಸೆ ಆಗುತ್ತಿರುವುದು ನೋಡಿ, ಎಲ್ಲರಿಗೂ ಒಂದು ರೀತಿಯ ನಿರಾಸೆಯಾಗಿತ್ತು. ಮಾಯಣ್ಣನ ತನಿಖೆಯೇ ದಾರಿ ತಪ್ಪಿದೆಯಾ ಎನ್ನುವ ಸಂದೇಹ ಬಂದಿತ್ತು. ಆದರೆ ಮಾಯಣ್ಣ ಮಂಡಿಸಿದ ತರ್ಕದಲ್ಲಿ ತಪ್ಪುಗಳೇನೂ ಕಾಣದಾಗಿತ್ತು. ಎಲ್ಲರೂ ಡೈರೆಕ್ಟರ್ ದಿನೇಶ್ ಯಾವ ಆಧಾರದ ಮೇಲೆ ಮುಕ್ತನಾಗುತ್ತಾನೆ ಎಂದು ತಿಳಿಯುವ ಕುತೂಹಲಿಗಳಾಗಿದ್ದರು.

'ಸರ್, ದಿನೇಶನ ಸಮಜಾಯಿಷಿ ಏನೆಂದರೆ, ಅವನು ಅಮ್ಮು ಕೊಲೆಯಾದ ದಿನ ಮತ್ತು ಸಮಯದಲ್ಲಿ, ಎಲ್ಲೂ ಹೋಗದೆ ತಾನು ವಾಸಿಸುವ ಮನೆಯ ರಸ್ತೆಯಲ್ಲೇ ವಾಕ್ ಮಾಡ್ತಾ ಇದ್ದೆ ಅಂತ... ಅದು ನಿಜ ಕೂಡ ಸರ್. ಅವನು ಪ್ರತಿ ದಿನ ಅದೇ ಸಮಯಕ್ಕೆ, ಅದೇ ರಸ್ತೆಯಲ್ಲಿ ವಾಕ್ ಮಾಡ್ತಾನೆ. ಆ ರಸ್ತೆಯಲ್ಲಿ ಸಿಸಿಟೀವಿ ಇಲ್ಲದಿರಬಹುದು. ಆದರೆ ಅದಕ್ಕಿಂತ ಕಡಿಮೆಯೇನು ಇಲ್ಲ ಅನ್ನುವಂತೆ ಒಬ್ಬ ಹಿರಿಯ ನಾಗರಿಕರಿದ್ದಾರೆ ಆ ರಸ್ತೆಯಲ್ಲಿ. ಅವರ ಮನೆ ಗೇಟಿನ ಪಕ್ಕಕ್ಕೆ, ಒಂದು ಬೇವಿನ ಮರ ಇದೆ, ಅದರ ನೆರಳಿಗೆ ಒಂದು ಕುರ್ಚಿ ಹಾಕಿಕೊಂಡು ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ರಸ್ತೆ ಮತ್ತು ನೆರೆಹೊರೆಯ ಎಲ್ಲಾ ಚಟುವಟಿಕೆಗಳನ್ನು ಗಮನಿಸುತ್ತಾ ಕಾಲಕ್ಷೇಪ ಮಾಡುತ್ತಾರೆ. ಮಧ್ಯೆ ಮಧ್ಯೆ ಕಸಬರಿಗೆ ಹಿಡಿದು ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ, ಸ್ವಇಚ್ಛೆಯಿಂದ ತಮ್ಮ ಮನೆ ಮುಂದಿನ ರಸ್ತೆ, ಮೋರಿ ಎಲ್ಲಾ ಗುಡಿಸಿ ಒಪ್ಪಮಾಡುವುದು, ನಿತ್ಯಕರ್ಮ ಅವರಿಗೆ. ಬಹುಶಃ ಕೆಲವರಿಗೆ ವಿಚಿತ್ರ ಅನ್ನಿಸಬಹುದಾದ ಅಭ್ಯಾಸವಿದು. ಅವರಿಗೆ ಈ ದಿನೇಶನ್ನ ಕಂಡರೆ ಭಾರೀ ಕೋಪ... ಈ ದಿನೇಶನಿಗೆ ರಸ್ತೆ ಪಕ್ಕ ನಿಂತು ಮೋರೀಲಿ ಉಚ್ಚೆ ಹುಯ್ಯುವ ದುರಭ್ಯಾಸ... ಅದಕ್ಕೆ ಈ ಹಿರಿಯರು ಅವನಿಗೆ ಒಂದೆರಡು ಸಾರಿ ಸಿಕ್ಕಾಪಟ್ಟೆ ಬೈದಿದ್ದಾರೆ, ಆದರೂ ಅವರ ಕಣ್ಣು ತಪ್ಪಿಸಿ ಆಗಾಗ ಅದು ಮಾಡ್ತಾನೇ ಇರ್ತಾನೆ. ಆದ್ದರಿಂದ ಆ ಹಿರಿಯರು ಇವನು ರಸ್ತೆಗೆ ಇಳಿದರೆ ಇವನ ಮೇಲೆ ಎರಡೂ ಕಣ್ಣಿಟ್ಟಿರುತ್ತಾರೆ. ಅಮ್ಮು ಕೊಲೆಯಾದ ದಿನದಂದು, ದಿನೇಶ ಅದೇ ತಪ್ಪು ಮತ್ತೆ ಮಾಡಿ ಈ ಸೀನಿಯರ್ ಸಿಟಿಜನ್ ಹತ್ತಿರ ಬೈಸ್ಕೊಂಡಿದ್ದಾನೆ. ಆನಂತರ ರಸ್ತೆಯಿಂದ ಅತ್ತಿತ್ತ ಹೋಗದ ಹಾಗೆ ಹನ್ನೊಂದೂವರೆಯ ತನಕ ರಸ್ತೆಯಲ್ಲೇ ವಾಕ್ ಮಾಡಿದ್ದಾನೆ ಅಂತ ಆ ಹಿರಿಯರು ಹೇಳಿದ್ದಾರೆ. ಅಷ್ಟೇ ಅಲ್ಲದೆ, ಅವನ ದಿನನಿತ್ಯದ ನಡಿಗೆಯ ದೂರ, ವೇಗ, ಸಮಯ, ಮಾರ್ಗ, ಎದೆಬಡಿತ ಎಲ್ಲವನ್ನು ದಾಖಲಿಸುವ ಅವನ ಸ್ಮಾರ್ಟ್ ವಾಚಿನ ವೀಕ್ಲಿ ರಿಪೋರ್ಟನ್ನು ನೋಡಿದ್ದೀನಿ. ಹಾಗೆ ಅವನ ಮೊಬೈಲ್ ಕಾಲ್ ರೆಕಾರ್ಡ್ ಕೂಡ ಚೆಕ್ ಮಾಡಿದ್ದೀನಿ. ಅವನು ಆ ಸಮಯದಲ್ಲಿ, ಅವನ ಮನೆ ಮುಂದಿನ ರಸ್ತೆಯಲ್ಲೇ, ಹನ್ನೆರಡು ಸಾವಿರ ಹೆಜ್ಜೆ ಹಾಕಿದ್ದಾನೆ, ಎಲ್ಲೂ ನಿಲ್ಲದ ಹಾಗೆ...'

ಮಾಯಣ್ಣನನ್ನು ಅರ್ಧಕ್ಕೆ ತಡೆದ ಎಸ್‌ಪಿ ಸಾಹೇಬರು, 'ಆ ದಿನ ಆ ವ್ಯಕ್ತಿಯ ಸ್ಮಾರ್ಟ್ ವಾಚ್ ಅವನ ಕೈಮೇಲೆ ಇತ್ತು ಅನ್ನೋದು ಏನು ಗ್ಯಾರಂಟಿ?'

'ಅವನ ನಡಿಗೆ ರಿಪೋರ್ಟ್ ಅವನ ಫೋನಿನಲ್ಲಿ ಕೂಡ ಇದೆ, ದಾರೀಲಿ ಅವನ ಪ್ರೊಡಕ್ಷನ್ ಟೀಮಿನೊಡನೆ ನಾಲ್ಕೈದು ಫೋನ್ ಸಂಭಾಷಣೆ ನಡೆಸಿದ್ದಾನೆ... ಅವನ ಫೋನ್ ಮತ್ತು ವಾಚ್ ಎರಡೂ ಬ್ಲೂಟೂತ್ ಮೂಲಕ ಲಿಂಕ್ ಆಗಿವೆ. ಅದು ಫೋನಿಂದ ಇಪ್ಪತ್ತು ಅಡಿಗಿಂತ ಜಾಸ್ತಿ ದೂರ ಇದ್ದರೂ ಕೆಲಸ ಮಾಡುವುದಿಲ್ಲ ಸರ್'.

ಸಾಹೇಬರ ಅನುಮಾನ ಪರಿಹರಿಸಿ ಮಾಯಣ್ಣ ಮತ್ತೆ ಮುಂದುವರಿಸಿದ್ದ.